**ದಿನಾಂಕ: 17.12.2022 ರಂದು ಮದ್ಯಾಹ್ನ 12:00 ಗಂಟೆಗೆ ವಾರ್ಡ್ ಸಂಖ್ಯೆ 203 (ಹಳೆ ವಾರ್ಡ್ ಸಂಖ್ಯೆ 180) ಬನಶಂಕರಿ ದೇವಸ್ಥಾನ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು.**

*ಹಾಜರಿದ್ದ ಅಧಿಕಾರಿಗಳು:-*

1. ಶ್ರೀ. ಸಿ. ಆರ್. ಸತೀಶ್ ಕುಮಾರ್ – ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು.
2. ಶ್ರೀ. ಮಂಜುನಾಥ್ ವೆಂಕಣ್ಣ ನಾಯಕ – ಸಹಾಯಕ ಅಭಿಯಂತರರು (ವಾರ್ಡ್ 203(180) ಬನಶಂಕರಿ ದೇವಸ್ಥಾನ) (ಕಿಯೋನಿಕ್ಸ್)
3. ಶ್ರೀ. ಮಹಮದ್ ಸಾದಿಕ್ – ಕಿರಿಯ ಆರೋಗ್ಯ ಪರಿವೀಕ್ಷಕರು

ಮೇಲೆ ಹಾಜರಿದ್ದ ಅಧಿಕಾರಿಗಳು ಹಾಗೂ ಸಮಿತಿ ಸದಸ್ಯರ ಸಮ್ಮುಖದಲ್ಲಿ ವಾರ್ಡ್ ಸಂಖ್ಯೆ 203 (ಹಳೆ ವಾರ್ಡ್ ಸಂಖ್ಯೆ 180) ರ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು (ಕಿಯೋನಿಕ್ಸ್) ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಈ ಹಿಂದಿನ ಸಭೆಯಲ್ಲಿ ನಡೆದ ವಿಷಯಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಯಿತು. ಅಧಿಕಾರಿಗಳಿಗೆ ನಿಗಧಿತ ಅವಧಿಯೊಳಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿ, ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

1. ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ಡೆಬ್ರಿಸ್ ವಿಲೇವಾರಿ ಬಗ್ಗೆ.

ವಾರ್ಡ್ ವ್ಯಾಪ್ತಿಯ ಪ್ರಗತಿಪುರದಲ್ಲಿ ಪ್ರಾಣಿ ತ್ಯಾಜ್ಯದ ವಿಲೇವಾರಿ ನಡೆಯುತ್ತಿರುವುದಿಲ್ಲ. ಅದರಿಂದ ಸಾರ್ವಜನಿಕರಿಗೆ ಓಡಾಡಲು ಅನಾನುಕೂಲವಾಗಿರುತ್ತದೆ ಎಂದು ಸಾರ್ವಜನಿಕರು ತಿಳಿಸದರು. ಹಾಗಾಗಿ ಸದರಿ ಪ್ರಾಣಿತ್ಯಾಜ್ಯಗಳನ್ನು ವಿಲೇವಾರಿ ಮಾಡಲು ಕ್ರಮಕೈಗೊಳ್ಳುವಂತೆ ಕಿರಿಯ ಆರೋಹ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.

2. ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ.

ಸಭೆಯಲ್ಲಿ ಬೆಂಗಳೂರು ಹವಮಾನ ಕ್ರಿಯಾ ಯೋಜನೆ ಮತ್ತು ಚೇತರಿಕೆ ಯೋಜನೆ ಬಗ್ಗೆ ವಾರ್ಡ್ ಹಂತದ ಸಮಲೋಚನೆಯನ್ನು ನಡೆಸಲಾಯಿತು. ಸದರಿ ಸಮಲೋಚನೆ ಕುರಿತು ಹವಮಾನದ ಬದಲಾವಣೆಯ ಬಗ್ಗೆ ತಿಳಿಸಲಾಯಿತ್ತು ಅದಕ್ಕೆ ಬೇಕಾದ ಕ್ರಮಗಳನ್ನು ಕೈಗೊಳ್ಳುವುದರ ಬಗ್ಗೆ ಚರ್ಚಿಸಲಾಯಿತು.

ವಾರ್ಡ್ ವ್ಯಾಪ್ತಿಯಲ್ಲಿರುವ ಕನಕಪುರ ಮುಖ್ಯರಸ್ತೆ ಮತ್ತು ಹೊರ ವರ್ತುಲ ರಸ್ತೆಗಳಲ್ಲಿ ವಾಹನೆ ಸಂಚಾರ ದಟ್ಟನೆಯಿದ್ದು ಸದರಿ ವಾಹನಗಳಿಂದ ವಾಯುಮಾಲಿನ್ಯ ಉಂಟಾಗುತ್ತಿರುತ್ತದೆ ಅದರಿಂದ ನಮ್ಮ ಸುತ್ತಮುತ್ತಲಿನ ಹವಮಾನವು ಹಾಳಾಗಿರುತ್ತದೆ ಎಂದು ಸಾರ್ವಜನಿಕರು ತಿಳಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ಗಂಗಾಧರನಗರದ 1ನೇ ಅಡ್ಡರಸ್ತೆಯ ಚರಂಡಿಗಳಲ್ಲಿ ಹೂಳು ತುಂಬಿರುತ್ತದೆ ಅದರಿದ ಚರಂಡಿಯ ನೀರು ರಸ್ತೆಯಲ್ಲಿ ಹರಿದು ಸಾರ್ವಜನಿಕ ಓಡಾಟಕ್ಕೆ ತೊಂದರೆಯಾಗುತ್ತಿರುತ್ತದೆ ಎಂದು ಸಾರ್ವಜನಿಕರು ತಿಳಿಸಿದರು.

ಪು.ತಿ.ನೋ

ವಾರ್ಡ್ ವ್ಯಾಪ್ತಿಯ ಸರಬಂಡೆಪಾಳ್ಯದಲ್ಲಿ ಸರ್ವಸಿದ್ಧಿ ವಿನಾಯಕ ದೇವಸ್ಥಾನ ಬಳಿ ಚರಂಡಿಗಳಲ್ಲಿ ಹೂಳು ತುಂಬಿರುತ್ತದೆ. ಅದರಿಂದ ಮಳೆಯ ನೀರು ರಸ್ತೆಯಲ್ಲಿ ಹರಿದು ಸಾರ್ವಜನಿಕ ಓಡಾಟಕ್ಕೆ ತೊಂದರೆಯಾಗುತ್ತಿರುತ್ತದೆ ಎಂದು ಸಾರ್ವಜನಿಕರು ತಿಳಿಸಿದರು.

ಮತದಾರರ ಗುರುತಿನ ಚೀಟಿಗೆ ಆಧಾರ್ ಜೋಡಣೆ ಮಾಡುವುದು ಹಾಗೂ 2023ನೇ ಸಾಲಿನ ಮತದಾರರ ಪಟ್ಟಿ ಪರಿಷ್ಕರಣೆಯ ಕಾರ್ಯ ನಡೆಯುತ್ತಿದ್ದು, ವಾರ್ಡ್ ವ್ಯಾಪ್ತಿಯ ಮತದಾರರ ಪಟ್ಟಿಯಲ್ಲಿ ಹೆಸರು ನೊಂದಾಯಿಸಲು ನಮೂನೆ-6, ತೆಗೆದುಹಾಕಲು ನಮೂನೆ-7 ಮತ್ತು ತಿದ್ದುಪಡಿಗೊಳಿಸಲು ನಮೂನೆ-8 ರಲ್ಲಿ ಅರ್ಜಿಯನ್ನು ಸಲ್ಲಿಸುವಂತೆ ಸಾರ್ವಜನಿಕರಿಗೆ ಕಂದಾಯ ಇಲಾಖೆ ಅಧಿಕಾರಿಗಳು ವಿವರಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿದಿನ ಕಸವನ್ನು ಸ್ವಚ್ಛಗೊಳಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ಕಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಸೂಚಿಸಲಾಯಿತು.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರು ಹಾಗೂ ನೋಡೆಲ್ ಅಧಿಕಾರಿಗಳಾದ ಶ್ರೀ. ಸಿ. ಆರ್. ಸತೀಶ್ ಕುಮಾರ್ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡೆಲ್ ಅಧಿಕಾರಿ  
ವಾರ್ಡ್ ಸಂಖ್ಯೆ 203  
ಬನಶಂಕರಿ ದೇವಸ್ಥಾನ